ನನ್ನ ಓದು

# ಬದುಕಿನ ಬೆರಗು–ಬೆಡಗುಗಳ ಆಪ್ತ–ಆರ್ದ್ರ ಕಥನಗಳು



**ಕಲ್ಲೇಶ್ ಕುಂಬಾರ್**

ಅನುಪಮಾ ಪ್ರಸಾದ್ ಸಮಕಾಲೀನ ಸಾಹಿತ್ಯ ಸಂದರ್ಭದ ಬಹುಮುಖ್ಯ ಕಥೆಗಾರರಲ್ಲಿ ಒಬ್ಬರು. ಲೋಕದ ಗ್ರಹಿಕೆಯನ್ನು ಮೀರಿ, ಮತ್ತೊಂದು ಸೃಜನಶೀಲ ಗ್ರಹಿಕೆಯ ನೆಲೆಯಲ್ಲಿ ಬದುಕನ್ನು ನೋಡುವ ಕ್ರಮದಿಂದಾಗಿ ಅವರ ಕಥೆಗಳು ಕೇವಲ ಕಥೆಗಳಾಗಿ ಉಳಿಯದೇ ವಾಸ್ತವದಲ್ಲಿ ಓದುಗ ನಿರ್ವಹಿಸುತ್ತಿರುವ ಬದುಕಿನ ಒಂದು ಭಾಗವಾಗಿಯೇ ಹೋಗಿರಬಹುದಾದಂಥ ವಾತಾವರಣವನ್ನು ಆ ಕ್ಷಣದಲ್ಲಿ ಸೃಷ್ಟಿಸುತ್ತವೆ. ಇದು ಸಾಧ್ಯವಾಗಿರುವುದು ಅನುಪಮಾ ಅವರು ಸುತ್ತಲಿನ ಬದುಕಿಗೆ ಮನಸ್ಸನ್ನು ತೆರೆದಿಟ್ಟು, ವಸ್ತುಸ್ಥಿತಿಯನ್ನು ಮೀರಿ, ವಾಸ್ತವ ಪ್ರಜ್ಞೆಯ ಪಾತಳಿಯ ಮೇಲೆ ಮನುಷ್ಯ ಮತ್ತು ಮನುಷ್ಯೇತರ ಬದುಕಿನ ಕುರಿತಾದ ತಮ್ಮ ಗ್ರಹಿಕೆಗಳನ್ನು ಕುಸುರಿ ಕಲೆಯಂತೆ ಕಥೆಯಾಗಿಸುವ ಕ್ರಮದಿಂದಾಗಿ ಎನ್ನಬೇಕು. ಹೀಗಾಗಿಯೇ, ಅವರ ಕಥೆಗಳನ್ನು ಓದುವಾಗ ಬದುಕಿನ ನಿಜ ಘಟನೆ ಯಾವುದು? ವಾಸ್ತವ ಮತ್ತು ಕಲ್ಪನೆ ಯಾವುದು? ಯಾವುದರಲ್ಲಿ ಯಾವುದು ಬೆರೆತಿದೆ? ಎಂಬುದೆಲ್ಲ ಸುಲಭಕ್ಕೆ ತಿಳಿಯದಂಥ ಸ್ಥಿತಿ ಓದುಗನದಾಗುತ್ತದೆ. ಈ ಸಂದರ್ಭದ ಅತ್ಯಂತ ಘೋರ ಹೇಗೋ ಅತ್ಯಂತ ಕನಿಷ್ಠ ಸಂಗತಿಗಳನ್ನೂ ಕಥೆಯಾಗಿಸಿ ಓದುಗನನ್ನು ನೋವು, ದುಃಖ, ವಿಷಾದ, ಸಂತೋಷದ ಮಡುವಿಗೆ ತಳ್ಳಿ ಚಿಂತನೆಗೀಡು ಮಾಡಿಬಿಡುತ್ತಾರೆ. ಈ ಮಾತಿಗೆ ಸಾಕ್ಷಿಯೆಂಬಂತೆ ಅವರು ಇತ್ತೀಚೆಗೆ ಹೊರ ತಂದಿರುವ 'ಚೋದ್ಯ' ಸಂಕಲನದಲ್ಲಿನ ಕಥೆಗಳಿವೆ. ಇಲ್ಲಿನ ಬಹುತೇಕ ಕಥೆಗಳಲ್ಲಿ ಬರುವ ಪಾತ್ರ, ಸನ್ನಿವೇಶ ಹಾಗೂ ಘಟನೆಗಳನ್ನು ನಮ್ಮ ಬದುಕಿನಲ್ಲಿ ಒಮ್ಮೆಯಾದರೂ ಮುಖಾಮುಖಿಯಾಗಿರುತ್ತೇವೆ ಎನ್ನುವುದು ಉತ್ಪ್ರೇಕ್ಷೆಯ ಮಾತಾಗಲಾರದು.

'ಮೊಲ್ಲೆ ಹೂ ಮಾದೇವಿ ಮೀಮಾಂಸೆ' ಕಥೆಯನ್ನು ಗಮನಿಸಿ. ಕೊರಾನಾ ಕಾಲಘಟ್ಟದಲ್ಲಿ ಈ ದೇಶದ ಕೆಳಸ್ತರದ ಜನರಿಗೆ ಆ ರೋಗ ತಂದೊಡ್ಡಿದ ಸಂದಿಗ್ಧಗಳು ಮತ್ತು ಆ ಕಾರಣವಾಗಿ ಅವರು ಆ ಸಂದರ್ಭದಲ್ಲಿ ನಿರ್ವಹಿಸಿದ ಯಾತನಾಮಯ ಬದುಕಿನ ಅತಿಘೋರವಾದ ಚಿತ್ರಣವನ್ನು ಈ ಕಥೆ ಕಟ್ಟಿಕೊಡುತ್ತದೆ; ಜಗತ್ತನ್ನೇ ತಲ್ಲಣಗೊಳಿಸಿದ ಕೊರೊನಾದಿಂದಾಗಿ ಇಡಿಯಾಗಿ ಮನುಕುಲವು ಸ್ವಯಂ ತನಗೆ ತಾನೇ ದೇಶ, ಭಾಷೆ, ಜಾತಿ ಮತ್ತು ಗಡಿಗಳನ್ನು ಮೀರಿ ಮಾನವೀಯ ಸಂಬಂಧಗಳನ್ನು ಅಳವಡಿಸಿಕೊಳ್ಳಲು ಕಾರಣವಾಯಿತು ಎಂಬುದನ್ನು ಕಥೆ ಅನಾವರಣ ಮಾಡುತ್ತದೆ. ಬದುಕಿನ ನಿರ್ವಹಣೆಗಾಗಿ ಬೆಳಗ್ಗೆ ಹೂ ಮಾರುವ, ಸಂಜೆ ಹೊತ್ತು ಬಜ್ಜಿ ಮಾಡಿ ಮಾರುವ ಮಾದೇವಿಯು ಈ ವ್ಯವಸ್ಥೆಯಲ್ಲಿನ ಅತ್ಯಂತ ಅಸಹಾಯಕ ಸ್ಥಿತಿಯಲ್ಲಿರುವ ಹೆಣ್ಣು. ಹೇಗಾದರೂ ಸರಿಯೇ ಬದುಕು ಮುನ್ನಡೆದರೆ